CCE-II-RR/PR/NSR/NSPR(B)/999/8001

**B**

**ಜೂನ್ 2024 ರ ಪರೀಕ್ಷೆ - 2**

**JUNE 2024 EXAMINATION - 2**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 45 ]
Total No. of Questions : 45 ]

**CCE RR/PR/ NSR/NSPR Full Syllabus**

**ಸಂಕೇತ ಸಂಖ್ಯೆ : 01-K**
**Code No. : 01-K**

Question Paper Serial No.

# ವಿಷಯ : ಪ್ರಥಮ ಭಾಷೆ — ಕನ್ನಡ

# Subject : First Language — KANNADA

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / NSR / NSPR)**

ದಿನಾಂಕ : 14. 06. 2024 ] [ Date : 14. 06. 2024
ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.
ಗರಿಷ್ಠ ಅಂಕಗಳು : 100 ] [ Max. Marks : 100

**14. 06. 2024**

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

ಇಲ್ಲಿಂದ ಕತ್ತರಿಸಿ

Tear here

Cut here/ಇಲ್ಲಿ ಕತ್ತರಿಸಿ

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ***ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** **6 × 1 = 6**

1. ವಿಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆಯಿದು

   (ಎ) ಎಚ್ಚರ

   (ಬಿ) ಉಷ್ಣ

   (ಸಿ) ಕಣ್ಣಿಗೆ

   (ಡಿ) ಬಟ್ಟೆ

2. 'ಮದೋನ್ಮತ್ತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

   (ಎ) ಲೋಪ ಸಂಧಿ

   (ಬಿ) ಆದೇಶ ಸಂಧಿ

   (ಸಿ) ಆಗಮ ಸಂಧಿ

   (ಡಿ) ಗುಣ ಸಂಧಿ

3. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸಲಾಗುವ ಲೇಖನ ಚಿಹ್ನೆ

(ಎ) ಅಲ್ಪವಿರಾಮ

(ಬಿ) ಪೂರ್ಣವಿರಾಮ

(ಸಿ) ಪ್ರಶ್ನಾರ್ಥಕ

(ಡಿ) ವಿವರಣಾತ್ಮಕ

4. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವ ವಾಕ್ಯ

(ಎ) ಮಿಶ್ರವಾಕ್ಯ

(ಬಿ) ಸರಳವಾಕ್ಯ

(ಸಿ) ಸಾಮಾನ್ಯ ವಾಕ್ಯ

(ಡಿ) ಸಂಯೋಜಿತ ವಾಕ್ಯ

5. 'ಸಪ್ತಮೀ' ವಿಭಕ್ತಿಯ ಕಾರಕಾರ್ಥವಿದು

(ಎ) ಕರಣಾರ್ಥ

(ಬಿ) ಅಧಿಕರಣ

(ಸಿ) ಸಂಪ್ರದಾನ

(ಡಿ) ಅಪಾದಾನ

6. 'ರಾಜೀವಸಖ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ತತ್ಪುರುಷ ಸಮಾಸ

(ಬಿ) ಅಂಶಿ ಸಮಾಸ

(ಸಿ) ಬಹುವ್ರೀಹಿ ಸಮಾಸ

(ಡಿ) ಗಮಕ ಸಮಾಸ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4 × 1 = 4**

7. ಚೀರ : ಸೀರೆ :: ಯುದ್ಧ : ..........................

8. ಓಡು ಓಡು : ದ್ವಿರುಕ್ತಿ :: ಧೀರಶೂರ : .......................... .

9. ಪರ್ವತ : ರೂಢನಾಮ :: ವಿದ್ವಾಂಸ : .......................... .

10. ಹೀಂಗ : ಹೀಗೆ :: ಇಸವಾಸ : ..........................

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **7 × 1 = 7**

11. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು ?

12. ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ ?

13. 'ಗುರುಪೂರ್ಣಿಮಾ' ದಿನದಂದು ಲೇಖಕರು ಯಾವುದನ್ನು ಪೂಜಿಸುತ್ತಾರೆ ?

14. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು ?

15. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ ?

16. ದಿನಪಸುತ ಎಂದರೆ ಯಾರು ?

17. 'ಬಿಲ್ಲಹಬ್ಬ'ವನ್ನು ರಚಿಸಿದ ಕವಿ ಯಾರು ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20**

18. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ?

19. ದುಡ್ಡಿನ ನಿಜರೂಪಗಳಾವುವು ?

20. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರು ಏನೆಂದು ಹೇಳಿದ್ದಾರೆ ?

21. ಜನರು ಮೂರ್ತಿಪೂಜೆ ಮಾಡಲು ಕಾರಣವೇನು ?

22. 'ಕೃಷ್ಣನು ಕೌರವೇಂದ್ರನನ್ನು ಕೊಂದನು' ಎಂದು ಕರ್ಣನು ಹೇಳಲು ಕಾರಣವೇನು ?

23. ಪಾರ್ಥ–ಭೀಮರನ್ನು ಕೊಂದ ಬಳಿಕ ಯುಧಿಷ್ಠಿರನೊಂದಿಗೆ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳಲು ಕಾರಣವೇನು ?

24. 'ಅನ್ ಟು ದಿಸ್ ಲಾಸ್ಟ್' ಗ್ರಂಥದ ಸಿದ್ಧಾಂತಗಳನ್ನು ಗಾಂಧೀಜಿಯವರು ಹೇಗೆ ತಿಳಿದರು ?

25. ಭಗತ್‌ಸಿಂಗ್ ಹೇಗೆ ಅಮರನಾದನು ?

26. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?

27. ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು ?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** **2 × 3 = 6**

28. ಡಿ.ಎಸ್. ಜಯಪ್ಪಗೌಡ

29. ಕುಮಾರವ್ಯಾಸ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** **1 × 3 = 3**

30. ಅಂಬುಜಾನನೆ ಕೇಳು ತಾಂಡವ

ನೆಂಬ ಮುನಿ ಪಿತೃ ಮಾತೃ ಸೇವಾ

ಲಂಬಕನು ತೊಳಲಿದನು ನಾನಾ ತೀರ್ಥಯಾತ್ರೆಯಲಿ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** **1 × 3 = 3**

31. "ಮಾರಿಗೌತಣವಾಯ್ತು ನಾಳಿನ ಭಾರತವು"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ :** **1 × 3 = 3**

32. ಕೂಡಿ ಬಾಳಿದರೆ ಸ್ವರ್ಗಸುಖ.

**ಅಥವಾ**

ಬೆಳ್ಳಗಿರುವುದೆಲ್ಲ ಹಾಲಲ್ಲ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 × 3 = 18**

33. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು."

34. "ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟದ್ದೇ"

35. "ಯಜ್ಞ ಸಂಸ್ಕೃತಿಯ ಒಂದು ಅನುಷ್ಠಾನ."

36. "ತಿಂಗಳಿನೂರಿನ ನೀರನು ಹೀರಿ"

37. "ಹಸುರು ಹಸುರಿಳೆಯುಸಿರೂ!"

38. "ಈಗಳೊಂದಡಕೆಯುಮಿಲ್ಲ ಕೈಯೊಳ್"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

39. ಕೊಡಲಿ ..........................................................

..........................................................

..........................................................

.......................................................... ನಾನೆಷ್ಟು

**ಅಥವಾ**

ಸಿಕ್ಕದ್ದು ..........................................................

..........................................................

..........................................................

.......................................................... ಜನಕಾ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** **1 × 4 = 4**

40. ಮತಗಳೆಲ್ಲವೂ ಪಥಗಳು ಎನ್ನುವ

ಹೊಸ ಎಚ್ಚರದೊಳು ಬದುಕೋಣ

ಭಯ–ಸಂಶಯದೊಳು ಕಂದಿದ ಕಣ್ಣೊಳು

ನಾಳಿನ ಕನಸನು ಬಿತ್ತೋಣ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **2 × 4 = 8**

41. ಧರ್ಮಬುದ್ಧಿ ಹಾಗೂ ದುಷ್ಟಬುದ್ಧಿ ಧರ್ಮಾಧಿಕರಣರ ಬಳಿಗೆ ಬರಲು ಕಾರಣವೇನು ? ವಿವರಿಸಿ.

**ಅಥವಾ**

'ಮಾಡಿದ್ದುಣ್ಣೊ ಮಾರಾಯ' ಎಂಬ ಮಾತು ದುಷ್ಟಬುದ್ಧಿಗೆ ಹೇಗೆ ಅನ್ವಯಿಸುತ್ತದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

42. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವಾದ ಅಂಶಗಳನ್ನು ಸಂಗ್ರಹಿಸಿ ಬರೆಯಿರಿ.

**ಅಥವಾ**

ಲವನಲ್ಲಿದ್ದ ಸಹಜ ಕ್ಷಾತ್ರಗುಣ 'ವೀರಲವ' ಪದ್ಯದಲ್ಲಿ ವ್ಯಕ್ತಗೊಂಡಿರುವುದನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 × 4 = 4 ( 2 + 2 )**

43. ಬಿ.ವಿ. ಕಾರಂತರು ಹುಟ್ಟಿದ್ದು ಬಂಟ್ವಾಳ ತಾಲೂಕಿನ ಬಾಬುಕೋಡಿ ಎಂಬ ಗ್ರಾಮದಲ್ಲಿ. ಆರ್ಥಿಕವಾಗಿ ಕಾರಂತರಿಗೆ ಬಡತನವಿದ್ದರೂ ಸಾಂಸ್ಕೃತಿಕವಾಗಿ ಬಡತನವಿರಲಿಲ್ಲ. ತಾಯಿ ಲಕ್ಷ್ಮಮ್ಮನವರು ಹಾಡುತ್ತಿದ್ದ ಸಂಪ್ರದಾಯದ ಹಾಡುಗಳು, ಮನೆಯಲ್ಲಿ ನಡೆಯುತ್ತಿದ್ದ ಭಜನೆಗಳು, ಊರಿನ ಹರಿಕಥೆ, ಯಕ್ಷಗಾನ, ಸುತ್ತ ಮುತ್ತಲ ಊರುಗಳ ಜಾತ್ರೆ, ಭೂತಕೋಲ, ರಥೋತ್ಸವ, ಪಾಡ್ದನಗಳು, ಪಾತ್ರಿಯ ದರ್ಶನ, ವಾದ್ಯಗಳ ಧ್ವನಿ ಕಾರಂತರಿಗೆ ಸಿಕ್ಕ ಕಲಾ ಶ್ರೀಮಂತಿಕೆ.

ಕನ್ನಡ ರಂಗಭೂಮಿಯನ್ನೇ ಏಕೆ, ಇಡೀ ಭಾರತದ ಅನೇಕ ರಂಗಭೂಮಿಗಳನ್ನು ಶ್ರೀಮಂತಗೊಳಿಸಿದವರು ಕಾರಂತರು. ಅವರು ತಮ್ಮ ಪ್ರಯೋಗಗಳಿಗೆ ಒಂದು ನಿರ್ದಿಷ್ಟ ಶೈಲಿ ರೂಢಿಸಿದವರಲ್ಲ. ಅಲ್ಲಲ್ಲಿಗೆ ಸಿಗುವ ಸಂಪನ್ಮೂಲಗಳನ್ನಾಶ್ರಯಿಸಿ, ಅಲ್ಲಿಗೆ ತಕ್ಕದ್ದೆನಿಸುವ ನಾಟಕ ಹುಡುಕಿ ಆಡಿಸುವ ಪ್ರವೃತ್ತಿ ಅವರದು. ಬಾಲ್ಯದಲ್ಲಿ ಶಾಲೆ-ಮನೆ ಎರಡರಿಂದಲೂ ವಂಚಿತರಾದ ಕಾರಂತರು 'ಮಕ್ಕಳ ಸ್ಕೂಲ್ ರಂಗಭೂಮಿಯಲ್ಲಿ' ಎಂಬಂತೆ ಮಕ್ಕಳ ರಂಗಭೂಮಿಗೆ ಶ್ರಮಿಸಿದರು. ಮಕ್ಕಳಿಗಾಗಿ ನಾಟಕ ರಚಿಸಿ, ನಿರ್ದೇಶಿಸಿದ್ದಾರೆ. ಪಂಜರ ಶಾಲೆ, ಕಿಂದರಿ ಜೋಗಿ, ಮೂಕನ ಮಕ್ಕಳು ಮೊದಲಾದ ನಾಟಕಗಳನ್ನು ಮಕ್ಕಳಿಗಾಗಿ ಮಾಡಿಸಿದ್ದಾರೆ. ಮಕ್ಕಳ ರಂಗದ ಕಲ್ಪನೆಯ ಮೂಲಕ ಚಿಣ್ಣರಿಗಾಗಿ ಹೊಸ ರಂಗಲೋಕ ನಿರ್ಮಿಸಿದವರು ಕಾರಂತರು.

***ಪ್ರಶ್ನೆಗಳು:***

ಅ) ಮಕ್ಕಳ ರಂಗಭೂಮಿಗೆ ಕಾರಂತರ ಕೊಡುಗೆಗಳೇನು ?

ಬ) ಬಾಲ್ಯದಲ್ಲಿ ಕಾರಂತರಿಗೆ ಸಿಕ್ಕ ಕಲಾಶ್ರೀಮಂತಿಕೆಯ ಬಗೆಗಳಾವುವು ?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :**

**1 × 5 = 5**

44. ನಿಮ್ಮನ್ನು ಬೆಂಗಳೂರಿನ ಸರ್ಕಾರಿ ಪ್ರೌಢಶಾಲೆಯ 'ಭಾರ್ಗವ' ಎಂದು ಭಾವಿಸಿಕೊಂಡು, 'ಪರೀಕ್ಷಾ ಸಮಯದಲ್ಲಿ ರಾತ್ರಿವೇಳೆ ವಿದ್ಯುತ್ ಪೂರೈಕೆಯಲ್ಲಿ ಕಡಿತ ಮಾಡದಂತೆ' ಕೋರಿ ವಿದ್ಯುಚ್ಛಕ್ತಿಮಂಡಳಿಯ ಮುಖ್ಯ ಇಂಜಿನಿಯರ್‌ರವರಿಗೆ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ರಾಮನಗರದ ಸರ್ಕಾರಿ ಪ್ರೌಢಶಾಲೆಯ 'ಭರತ್' ಎಂದು ಭಾವಿಸಿಕೊಂಡು, ಶಾಲೆಯ 'ಪೋಷಕರ ಸಭೆ' ಗೆ ಆಹ್ವಾನಿಸಿ ತೀರ್ಥಹಳ್ಳಿಯಲ್ಲಿ ವಾಸವಾಗಿರುವ 'ಶಾರದಾ' ಎಂಬ ಹೆಸರಿನ ತಾಯಿಯವರಿಗೆ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :**

**1 × 5 = 5**

45. ಮಹಿಳಾ ಸಬಲೀಕರಣ.

**ಅಥವಾ**

ಶಾಲಾ ಆವರಣ ಹಾಗೂ ಶೌಚಾಲಯ ಸ್ವಚ್ಛತೆ.

DO NOT WRITE ANYTHING HERE